ಕರ್ನಾಟಕ ಸರ್ಕಾರ
# ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಆರೋಗ್ಯ ಸೌಧ, 4ನೇ ಮಹಡಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು 560 023.
Email : ksmha1@gmail.com

File No: KSMHA/MHECir/2024-25 Date: 24/12/2024
E-1491075

## ಸುತ್ತೋಲೆ

**ವಿಷಯ: ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ, 2017 ರಡಿ ಮಾನಸಿಕ ಆರೋಗ್ಯ ಸಂಸ್ಥೆಗಳಿಗೆ ಅನ್ವಯವಾಗುವ ಕಲಂಗಳನ್ನು ಕಡ್ಡಾಯವಾಗಿ ಅನುಸರಿಸುವ ಕುರಿತು.**

****

ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ, 2017 ರನ್ವಯ (MHCA, 2017) ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಅಡಿಯಲ್ಲಿ ತಮ್ಮ ಸಂಸ್ಥೆಯನ್ನು ನೋಂದಣಿ ಮಾಡಿಕೊಂಡಿರುವುದು ಸರಿಯಷ್ಟೆ. ಈ ಪ್ರಾಧಿಕಾರದ ಆದೇಶದಂತೆ ತಂಡವು ಅನೇಕ ಮಾನಸಿಕ ಆರೋಗ್ಯ ಸಂಸ್ಥೆಗಳಿಗೆ ಭೇಟಿ ನೀಡಿ ತಪಾಸಣೆ/ತನಿಖೆ ನಡೆಸಿ ಪರಿಶೀಲಿಸಿದ ಸಂದರ್ಭದಲ್ಲಿ ಗಮನಿಸಿದಂತೆ ಹಲವಾರು ಸಂಸ್ಥೆಗಳು MHCA 2017 ರಡಿ ಅನ್ವಯವಾಗುವ ಕಲಂಗಳನ್ನು ಪಾಲಿಸದೇ ಇರುವುದು ಕಂಡುಬಂದಿರುತ್ತದೆ.

ಆದುದರಿಂದ, ಎಲ್ಲಾ ಮಾನಸಿಕ ಆರೋಗ್ಯ ಸಂಸ್ಥೆಗಳು ಈ ಕೆಳಕಂಡಂತೆ MHCA 2017 ರಡಿ ಅನ್ವಯವಾಗುವ ಕಲಂಗಳನ್ನು ಕಡ್ಡಾಯವಾಗಿ ಪಾಲಿಸಲು ಹಾಗೂ ಅದರಂತೆ ದಾಖಲೆಗಳನ್ನು ನಿರ್ವಹಿಸಲು ಈ ಮೂಲಕ ಸೂಚನೆ ನೀಡಲಾಗಿದೆ.

1. MHCA 2017 ರ Section 85, 86, 87, 89, 90 ಪ್ರಕಾರ ಮಾನಸಿಕ ಅಸ್ವಸ್ಥರ admission procedures ಗಳನ್ನು ಪಾಲನೆ ಮಾಡತಕ್ಕದ್ದು.
2. Emergency treatment ಬಗ್ಗೆ section 94 ಅನ್ನು ಮತ್ತು Prohibited procedures ಬಗ್ಗೆ section 95 ಅನ್ನು ಅನುಸರಣೆ ಮಾಡಬೇಕಾಗಿರುತ್ತದೆ.
3. Section 87, 89 & 90 ಪ್ರಕಾರ ಮಾಹಿತಿಯನ್ನು Mental Health Review Board ಗೆ ಕಡ್ಡಾಯವಾಗಿ ತಿಳಿಸಬೇಕಾಗಿರುತ್ತದೆ.
4. Restriction on psychosurgery for persons with mental illness ಬಗ್ಗೆ section 96 ಅನ್ನು ಹಾಗೂ Restraints and seclusion section 97 ಅನ್ನು ಅನುಸರಣೆ ಮಾಡಬೇಕಾಗಿರುತ್ತದೆ.
5. Discharge planning ಬಗ್ಗೆ section 98 ಅನ್ನು ಹಾಗೂ Research ಬಗ್ಗೆ section 99 ಅನ್ನು ಅನುಸರಣೆ ಮಾಡಬೇಕಾಗಿರುತ್ತದೆ
6. Section 70 (1) ಪ್ರಕಾರ ನೋಂದಣಿ ಪ್ರಮಾಣ ಪತ್ರವನ್ನು ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ಸಂಸ್ಥೆಗೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ಗೋಚರಿಸುವ ರೀತಿಯಲ್ಲಿ ಪ್ರದರ್ಶಿಸಬೇಕು ಮತ್ತು Section 70 (4) ಪ್ರಕಾರ ಮಾನಸಿಕ ಆರೋಗ್ಯ ಸಂಸ್ಥೆಯ ಮಾಲೀಕತ್ವವು ಬದಲಾವಣೆ ಆದರೆ ಬದಲಾವಣೆಯ ದಿನಾಂಕದಿಂದ ಒಂದು ತಿಂಗಳೊಳಗೆ ಪ್ರಾಧಿಕಾರಕ್ಕೆ ಹೊಸ ಮಾಲೀಕತ್ವದ ಬಗ್ಗೆ ತಿಳಿಸಬೇಕು.
7. Section 88 ಪ್ರಕಾರ, Discharge procedure ಮಾಡತಕ್ಕದ್ದು.

Scanned with OKEN Scanner

8. Section 21(1)(c) ರನ್ವಯ ಆಂಬ್ಯುಲೆನ್ಸ್ ಸೇವೆಗಳ ಬಳಕೆಯನ್ನು ಮಾನಸಿಕ ಅಸ್ವಸ್ಥ ವ್ಯಕ್ತಿಗಳಿಗೆ ಒದಗಿಸಬೇಕಾಗಿರುತ್ತದೆ.
9. Section 21(4) ರ ಪ್ರಕಾರ, ಇತರೆ ವೈದ್ಯಕೀಯ ಚಿಕಿತ್ಸೆಯಂತೇ ಮಾನಸಿಕ ಚಿಕಿತ್ಸೆಗೂ ಕೂಡ ವೈದ್ಯಕೀಯ ವಿಮೆಯು ಅನ್ವಯವಾಗುವ ಮಾಹಿತಿಯನ್ನು ಮಾನಸಿಕ ಅಸ್ವಸ್ಥರಿಗೆ ತಿಳಿಸುವ ಕಾರ್ಯವನ್ನು ಮಾಡಬೇಕಾಗಿರುತ್ತದೆ.
10. Section 4 (Capacity Assessment) ಜಾರಿಗೊಳಿಸಲು ಕೇಂದ್ರ ಪ್ರಾಧಿಕಾರವು ರಚಿಸಿರುವ expert committee ಯ Guidance document ಅನ್ನು ಉಪಯೋಗಿಸತಕ್ಕದ್ದು.
11. Section 19 ರಿಂದ 28 ರವರೆಗೆ ಕಾನೂನು ನೀಡಲಾಗಿರುವ ಮಾನಸಿಕ ಅಸ್ವಸ್ಥರ ಹಕ್ಕುಗಳನ್ನು ಪಾಲಿಸತಕ್ಕದ್ದು.
12. Section 28 ರ ಪ್ರಕಾರ ಮಾನಸಿಕ ಅಸ್ವಸ್ಥತೆ ಹೊಂದಿರುವ ಯಾವುದೇ ವ್ಯಕ್ತಿ ಅಥವಾ ಅವರ ನಾಮನಿರ್ದೇಶಿತ ಪ್ರತಿನಿಧಿ ರವರು ಆರೈಕೆ, ಚಿಕಿತ್ಸೆ ಮತ್ತು ಸೇವೆಗಳನ್ನು ಒದಗಿಸುವಲ್ಲಿ ಯಾವುದೇ ಕೊರತೆಗಳು ಕಂಡುಬಂದರೆ, ಮಾನಸಿಕ ಆರೋಗ್ಯ ವೃತ್ತಿಪರರ ಮತ್ತು ಸಂಬಂಧಪಟ್ಟ ಮಂಡಳಿಯ ಪ್ರತಿಕ್ರಿಯೆಯ ಬಗ್ಗೆ ತೃಪ್ತರಾಗದಿದ್ದರೆ; ಪ್ರಾಧಿಕಾರಕ್ಕೆ ದೂರು ನೀಡುವ ಹಕ್ಕಿನ ಬಗ್ಗೆ ತಿಳಿಸುವುದು.
13. ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸುವುದು.
14. ಮಾನಸಿಕ ಆರೋಗ್ಯ ಸಂಸ್ಥೆಯವರು e-sanjeevini, Tele Manas 108 ಮತ್ತು Manochaitanya camps Service ಗಳ ಬಗ್ಗೆ ಮಾನಸಿಕ ಅಸ್ವಸ್ಥರಿಗೆ ತಿಳಿಸುವುದು.
15. ಮುಂದುವರೆದು ತಾವು E-manas ಜಾಲತಾಣದಲ್ಲಿ ನೋಂದಣಿ ಪಡೆಯಲು Phone number, E-mail ID ಮತ್ತು postal address ಅನ್ನು ಸಲ್ಲಿಸಿರುತ್ತೀರಿ. ಹೀಗೆ, ಸಲ್ಲಿಸಿರುವ ಮಾಹಿತಿಯಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಿದ ಸಂದರ್ಭದಲ್ಲಿ ಅತಿ ಶೀಘ್ರವಾಗಿ ಬದಲಾಯಿಸಿದ ಮಾಹಿತಿಯನ್ನು ಇ-ಮನಸ್ ನಲ್ಲಿ modify ಮಾಡಲು ಹಾಗೂ ಮನೋವೈದ್ಯರು ತಮ್ಮ ಸಂಸ್ಥೆಗೆ ಮಾನಸಿಕ ಅಸ್ವಸ್ಥರನ್ನು ಪರೀಕ್ಷೆ ಮಾಡಲು ಬರುವುದರ ಬಗ್ಗೆ ಅವರಿಂದ ಒಪ್ಪಿಗೆ ಪತ್ರವನ್ನು ಪಡೆದು E-manas ಜಾಲತಾಣದಲ್ಲಿ update ಮಾಡಲು ಸೂಚಿಸಲಾಗಿದೆ.

ಈ ಮೇಲಿನ ಕಾನೂನು ನಿರ್ದೇಶನಗಳನ್ನು ಪಾಲಿಸಲು ತಪ್ಪಿದ್ದಲ್ಲಿ MHCA. 2017 section 108 ರಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

K. B. [signature] 24/12

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು**
ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ
ಮತ್ತು ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು.

**ಸೂಕ್ತ ಕ್ರಮಕ್ಕಾಗಿ:**

1. ಮಾಲೀಕರು, ಮಾನಸಿಕ ಆರೋಗ್ಯ ಸಂಸ್ಥೆ.......................................................
2. ಕಛೇರಿ ಪ್ರತಿ

Scanned with OKEN Scanner